# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-560 027

ಸಂ:ಕರಾಸಾ:ಕೇಕ:ಸಂ:ಸಿ2: 1819 :2019-20 ದಿನಾಂಕ: 09.12.2019

## ಸುತ್ತೋಲೆ ಸಂಖ್ಯೆ : 1522 /2019

ವಿಷಯ : ಸಾಂದರ್ಭಿಕ ಒಪ್ಪಂದದ ದರ ಪರಿಷ್ಕರಣೆ ಬಗ್ಗೆ.

ಉಲ್ಲೇಖ : 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 793/ 2018 ದಿನಾಂಕ 21.04.2018.
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 795 /2018 ದಿನಾಂಕ 07.11.2018.
3. ಸುತ್ತೋಲೆ ಸಂಖ್ಯೆ : 1485 /2019 ದಿನಾಂಕ 12.04.2019.

*****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳನ್ನು ಸಾಂದರ್ಭಿಕ ಒಪ್ಪಂದದ ಮೇಲೆ ಒದಗಿಸಲು ವಿಧಿಸಬೇಕಾದ ದರ, ಕಿ.ಮೀ, ಷರತ್ತು ನಿಬಂಧನೆಗಳ ಸಂಬಂಧ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶ ಹಾಗೂ ಸುತ್ತೋಲೆಗಳಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ನಿಗಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಕರ್ನಾಟಕ ಸಾರಿಗೆ ವಾಹನಗಳ ಆಚರಣಾ ವೆಚ್ಚ ಹೆಚ್ಚಳವಾಗಿರುವುದನ್ನು ಪರಿಗಣಿಸಿ, ಕರ್ನಾಟಕ ಸಾರಿಗೆ ವಾಹನಗಳ ಒಪ್ಪಂದದ ದರಗಳನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿದೆ. ವಾರದ ದಿನಗಳಿಗೆ ಹಾಗೂ ವಾರಾಂತ್ಯದ ದಿನಗಳಿಗೆ ಪ್ರತ್ಯೇಕ ದರಗಳನ್ನು ಮುಂದುವರೆಸಲಾಗಿದೆ. ಅದರನ್ವಯ ಇನ್ನು ಮುಂದೆ ಕರ್ನಾಟಕ ಸಾರಿಗೆ ವಾಹನಗಳಿಗೆ ಈ ಕೆಳಕಂಡಂತೆ ದರ ವಿಧಿಸುವುದು.

| ಬಸ್ಸಿನ ವಿಧ | ಆಸನಗಳ ಸಂಖ್ಯೆ | ದಿನಕ್ಕೆ ಕನಿಷ್ಠ ಪ್ರಯಾಣದ ಕಿ.ಮೀ | ಪ್ರತಿ ಕಿ.ಮೀ ದರ (ರೂ.ಗಳಲ್ಲಿ) ವಾರದ ಎಲ್ಲಾ ದಿನಗಳಿಗೆ | |
|---|---|---|---|---|
| | | | ರಾಜ್ಯದೊಳಗೆ | ಅಂತರರಾಜ್ಯ |
| ಕರ್ನಾಟಕ ಸಾರಿಗೆ | 55/47/49 | 300 | 39 | 41 |

ಪರಿಷ್ಕೃತ ದರಗಳು ದಿನಾಂಕ 15.12.2019 ರಿಂದ ಜಾರಿಗೆ ಬರಲಿವೆ. ಈ ಆದೇಶ ಹೊರಡಿಸುವ ಮೊದಲು ಬುಕಿಂಗ್ ಮಾಡಿಕೊಂಡಿರುವ ಒಪ್ಪಂದದ ವಾಹನಗಳಿಗೆ, ಹಳೆಯ ದರಗಳನ್ನು ವಿಧಿಸುವುದು.

ಮುಂದುವರೆದು, ಬೆಂಗಳೂರು ನಗರದಲ್ಲಿ 24 ಗಂಟೆಗಳ ಅವಧಿಗೆ, ಎರಡು ಕ್ಯಾಲೆಂಡರ್ ದಿನಗಳಿಗೆ ಸಾಂದರ್ಭಿಕ ಒಪ್ಪಂದದ ಮೇಲೆ ಬುಕಿಂಗ್ ಆಗುವ ಕರ್ನಾಟಕ ಸಾರಿಗೆ ಹಾಗೂ ರಾಜಹಂಸ ವಾಹನಗಳಿಗೆ ಕನಿಷ್ಠ 350 ಕಿ.ಮೀಗಳಿಗೆ ಶುಲ್ಕ ವಿಧಿಸಲು ತೀರ್ಮಾನಿಸಲಾಗಿದೆ. ಅದರನ್ವಯ ಇನ್ನು ಮುಂದೆ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಗಿದೆ.

1. ಬೆಂಗಳೂರು ನಗರದಲ್ಲಿ (ಸಿಸಿ ಸೆಲ್, ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-1, ಘಟಕ-5 ಮತ್ತು ಘಟಕ-6 ರಲ್ಲಿ) ಸಾಂದರ್ಭಿಕ ಒಪ್ಪಂದದ ಮೇಲೆ 24 ಗಂಟೆಗಳ ಅವಧಿಗೆ (ಒಂದು ದಿನ) ಎರಡು ಕ್ಯಾಲೆಂಡರ್ ದಿನಗಳಿಗೆ ಬುಕಿಂಗ್ ಆಗುವ ಕರ್ನಾಟಕ ಸಾರಿಗೆ ಬಸ್ಸುಗಳಿಗೆ ಹಾಗೂ ರಾಜಹಂಸ ಬಸ್ಸುಗಳಿಗೆ ಕನಿಷ್ಠ 350 ಕಿ.ಮೀಗಳಿಗೆ ಶುಲ್ಕ ವಿಧಿಸುವುದು. ಬೆಂಗಳೂರು ಹೊರತುಪಡಿಸಿ ಇತರೆಡೆಗಳಲ್ಲಿ ದಿನದ ಕನಿಷ್ಠ ಕಿ.ಮೀ 300 ಮುಂದುವರೆಯಲಿದೆ.



Scanned by CamScanner

2. ಬೆಂಗಳೂರು ನಗರದಲ್ಲಿ ಬೆಳಗ್ಗೆ ಹೊರಟು ಅದೇ ದಿನ ರಾತ್ರಿ 1200 ಗಂಟೆಯೊಳಗೆ ಹಿಂದಿರುಗುವ ಕರ್ನಾಟಕ ಸಾರಿಗೆ ಮತ್ತು ರಾಜಹಂಸ ವಾಹನಗಳಿಗೆ ಕನಿಷ್ಠ 300 ಕಿ.ಮೀ ಗಳನ್ನು ಮುಂದುವರೆಸಲಾಗಿದೆ.
3. ಎರಡು ದಿನ ಹಾಗೂ ಮೇಲ್ಪಟ್ಟ ದಿನಗಳಿಗೆ ಸಾಂದರ್ಭಿಕ ಒಪ್ಪಂದದ ಮೇಲೆ ಬುಕಿಂಗ್ ಮಾಡಿದಲ್ಲಿ, ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶದಲ್ಲಿನ ನಿರ್ದೇಶನಗಳಂತೆ ಕಿ.ಮೀಗಳನ್ನು ವಿಧಿಸುವುದು.
4. ಮೇಲ್ಕಂಡ ನಿರ್ದೇಶನಗಳು ದಿನಾಂಕ 15/12/2019 ರಿಂದ ಜಾರಿಗೆ ಬರಲಿವೆ.

ಇನ್ನುಳಿದಂತೆ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶ / ಸುತ್ತೋಲೆಗಳಲ್ಲಿ ಇತರೆ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

ಈ ಸುತ್ತೋಲೆ ಸ್ವೀಕರಿಸಿ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ಕಳುಹಿಸುವುದು.

(ಶಿವಯೋಗಿ ಸಿ ಕಳಸದ, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು
ಕರಾರಸಾ ನಿಗಮ.

ಪ್ರತಿಯನ್ನು :

1. ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ / ವಾ.ಕ.ರ.ಸಾ. ಸಂಸ್ಥೆ / ಈ.ಕ.ರ.ಸಾ.. ಸಂಸ್ಥೆ, ಕೇಂದ್ರ ಕಛೇರಿ ಬೆಂಗಳೂರು/ಹುಬ್ಬಳ್ಳಿ/ಕಲ್ಬುರ್ಗಿರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು /ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ. ನಿಗಮರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ / ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು/ಹುಬ್ಬಳ್ಳಿ/ಕಲಬುರ್ಗಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5. ಹಿರಿಯ / ಆಪ್ತ ಕಾರ್ಯದರ್ಶಿಗಳು, ಅಧ್ಯಕ್ಷರು / ಉಪಾಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಸಿ&ಪ) / (ಭ&ಜಾ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.



Scanned by CamScanner